<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಮತ್ತು ಮಾದಕದ್ರವ್ಯ ಪ್ರಕರಣಗಳ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (NDPS) 13/2024**

ಫ್ರಾಸಾಃ **05** ಚಾಸಾಃ **10**
ದಿನಾಂಕಃ 30-07-2026

| | |
|---|---|
| ಹೆಸರು | :: ಜಗದೀಶ್ ಎಸ್.ಆರ್ |
| ತಂದೆಯ ಹೆಸರು | :: ರಾಮಯ್ಯ |
| ವಯಸ್ಸು | :: 46 ವರ್ಷ |
| ಉದ್ಯೋಗ | :: ಸಿಪಿಐ, ಬೇತಮಂಗಲ ವೃತ್ತ |
| ವಾಸ ಸ್ಥಳ | :: ಬೇತಮಂಗಲ |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಗಕರಾದ ಮಾಧವ ಪದ್ಮನಾಭ ಗಾವಂಕರ್ ರವರಿಂದಃ</u>

1. ಸೆಪ್ಟೆಂಬರ್ 2023 ರಿಂದ ಫೆಬ್ರವರಿ 2024 ರವರೆಗೆ ನಾನು ಕೋಲಾರದ ಸಿಇಎನ್ ಪೋಲೀಸ್ ಠಾಣೆಯಲ್ಲಿ ಇನ್ಸ್ ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 04.11.2023 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ 4 ರವರಿಂದ ಪಡೆದೆ. ಅದೇ ದಿನ ಮಾನ್ಯ ನ್ಯಾಯಾಲಯದ ಅನುಮತಿಯಂತೆ ಮಾನ್ಯ ಪ್ರಧಾನ ಸಿಜೆಎಂ ನ್ಯಾಯಾಧೀಶರ ಮುಂದೆ ಮಧ್ಯಾಹ್ನ ಸುಮಾರು 2.30-3.00 ಗಂಟೆ ಸಮಯದಲ್ಲಿ ಹಾಜರಾಗಿ, ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದ 2.020 ಕೆಜಿ ಗಾಂಜಾವನ್ನು ಅವರ ಸಮಕ್ಷಮ ಹಾಜರು ಪಡಿಸಿದೆ. ಅಲ್ಲಿಯವರೆಗೂ ಸದರಿ ಮುದ್ದೆಮಾಲನ್ನು ಠಾಣೆಯ ಸ್ಟೋರ್ ರೂಮಿನಲ್ಲಿ ಇಡಲಾಗಿತ್ತು. ಮಾನ್ಯ ನಾಯಾಧೀಶರ ಸಮಕ್ಷಮ ಸದರಿ ಮುದ್ದೆಮಾಲನ್ನು ತೂಕ ಮಾಡಿದೆ. ನಂತರ ಪ್ಯಾಕ್ ನ್ನು ಬಿಚ್ಚಿ ನೋಡಲಾಗಿ ಅದರಲ್ಲಿ ಗಾಂಜಾ ಇತ್ತು. ಅದರಲ್ಲಿ 30 ಗ್ರಾಂ ನಷ್ಟು ಗಾಂಜಾವನ್ನು ಸ್ಯಾಂಪಲ್ ಗಾಗಿ ಪ್ರತ್ಯೇಕ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ, ದಾರದಿಂದ ಕಟ್ಟಿ, 'K' ಎಂಬ ಮೊಹರಿನಿಂದ ಅರಗಿನ ಸೀಲ್ ಮಾಡಿದೆ. ನಂತರ ಅದಕ್ಕೆ ನನ್ನ ಹಾಗೂ ಮಾನ್ಯ ನ್ಯಾಯಾಧೀಶರ ಸಹಿ ಇರುವ ಚೀಟಿಯನ್ನು ಅಂಟಿಸಿದೆ. ಈಗ ತೋರಿಸಿದ ಗಾಂಜಾ ಇನ್ವೆಂಟ್ರಿ ಸಮಯದಲ್ಲಿ ಸ್ಯಾಂಪಲ್ ಗಾಗಿ ತೆಗೆದಿದ್ದು ಇದೆ. ಅದನ್ನು ಮು ಮಾಲು 1 ಎಂದು ಗುರ್ತಿಸಲಾಯಿತು. ಇನ್ವೆಂಟ್ರಿ ಸಮಯದಲ್ಲಿ ಮಾನ್ಯ ನ್ಯಾಯಾಧೀಶರು ಮಾಡಿದ ಪ್ರಕ್ರಿಯೆಯ ದಾಖಲೆ ಈಗ ತೋರಿಸಿದ್ದು ಇದೆ. ಅದನ್ನು ನಿ ಪಿ 14

ಎಂದು ಗುರ್ತಿಸಲಾಯಿತು. ಇನ್ವೆಂಟ್ರಿ ಸಮಯದಲ್ಲಿ ಸಿಬ್ಬಂದಿಯಾದ ಪ್ರಸನ್ನ ಕುಮಾರ್ ಇವರು ಈಗ ತೋರಿಸಿದ ಛಾಯಾಚಿತ್ರಗಳನ್ನು ತೆಗೆದಿದ್ದಾರೆ. ಸದರಿ 9 ಛಾಯಾಚಿತ್ರಗಳನ್ನು ಒಟ್ಟಾಗಿ ನಿ ಪಿ 15 ಎಂದು ಗುರ್ತಿಸಲಾಯಿತು. ಬಲ್ಕ್ ಗಾಂಜಾವನ್ನು ಸಹಾ ಪ್ಯಾಕ್ ಮಾಡಿ, 'K' ಎಂಬ ಮೊಹರಿನಿಂದ ಸೀಲ್ ಮಾಡಿದೆ. ನಿ ಪಿ 15 ಛಾಯಾಚಿತ್ರಗಳಿಗೆ ಸಂಬಂಧಿಸಿದಂತೆ ಸದರಿ ಪ್ರಸನ್ನ ಕುಮಾರ್ ರವರಿಂದ ಈಗ ತೋರಿಸಿದ ದೃಢೀಕರಣವನ್ನು ಪಡೆದಿದ್ದೇನೆ. ಅದನ್ನು ನಿ ಪಿ 16 ಎಂದು ಗುರ್ತಿಸಲಾಯಿತು.

2. ನಂತರ ಮು ಮಾಲು 1 ನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 62/2023 ರಲ್ಲಿ ನಮೂದಿಸಿ, ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದೆ. ಸದರಿ ಪಿ.ಎಫ್ ನಲ್ಲಿಯೇ ಬಲ್ಕ್ ಗಾಂಜಾವನ್ನು ನಾಶಕ್ಕಾಗಿ ಡ್ರಗ್ ಡಿಸ್ಪೋಸಲ್ ಕಮಿಟಿಗೆ ಕಳುಹಿಸಿಕೊಡಲು ಅನುಮತಿಯನ್ನು ಪಡೆದೆ. ಈಗ ತೋರಿಸಲಾದ ದಾಖಲೆ ಸದರಿ ಮಾಲುಪಟ್ಟಿ ಇದೆ. ಅದನ್ನು ನಿ ಪಿ 17 ಎಂದು ಗುರ್ತಿಸಲಾಯಿತು.

3. ದಿನಾಂಕ 05.11.2023 ರಂದು ಮು ಮಾಲು 1 ಇದನ್ನು ಪರೀಕ್ಷೆಗಾಗಿ ಸಿಬ್ಬಂದಿಯಾದ ಅರುಣ್ ಕುಮಾರ್ ರವರ ಮೂಲಕ ಕಳುಹಿಸಿಕೊಟ್ಟೆ ದಿನಾಂಕ 15.12.2023 ರಂದು ಈ ಪ್ರಕರಣದ ಎಫ್.ಎಸ್.ಎಲ್ ವರದಿಯನ್ನು ಎಫ್.ಎಸ್.ಎಲ್ ನವರ FLMS ತಂತ್ರಾಂಶದಿಂದ ಡೌನ್ ಲೋಡ್ ಮಾಡಿಕೊಂಡೆ. ಈಗ ತೋರಿಸಿದ ದಾಖಲೆ ಸದರಿ ಎಫ್.ಎಸ್.ಎಲ್ ನವರ ವರದಿ ಇದೆ. ಅದನ್ನು ನಿ ಪಿ 18 ಎಂದು ಗುರ್ತಿಸಲಾಯಿತು. ದಿನಾಂಕ 20.12.2023 ರಂದು ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದೆ.

ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಫ್.ಎ. ವಕೀಲರಿಂದಃ *(ಅವರ ಸಹವಕೀಲರು ಪಾಟೀ ಸವಾಲನ್ನು ಮಧ್ಯಾಹ್ನ ಮಾಡುವುದಾಗಿ ತಿಳಿಸಿದ್ದರಿಂದ ಮಧ್ಯಾಹ್ನದವರೆಗೆ ಮುಂದೂಡಲಾಯಿತು.)*

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

**ಓ. ಹೇ. ಕೇ. ಸ. ಇದೆ,**

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ

<u>ಮಧ್ಯಾಹ್ನ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಫ್.ಎ ವಕೀಲರಿಂದಃ</u>

4. ಕಡತವನ್ನು ಸ್ವೀಕರಿಸಿದಾಗ ಕಡತವನ್ನು ಪರಿಶೀಲಿಸಿದ್ದೇನೆ. ಪ್ರಾಸಾ 1 ರವರು ನಿ ಪಿ 2 ರಲ್ಲಿ ತಾವು ದಿನಾಂಕ 19.10.2023 ರಂದು ಮಧ್ಯಾಹ್ನ 12.00 ಗಂಟೆಗೆ ಠಾಣೆಯಲ್ಲಿ ಇದ್ದಿದ್ದಾಗಿ ತಿಳಿಸಿದ್ದಾರೆ ಎಂದರೆ ಸರಿ. ನಿ ಪಿ 3 ಮತ್ತು 4 ರಲ್ಲಿ ಸಮಯ over writing ಇದೆ ಎಂದರೆ ಸರಿ. ಯಾವುದೇ ತಿದ್ದುಪಡಿ ಇದ್ದರೆ ಅದರ ಮೇಲೆ ತಿದ್ದುಪಡಿ ಮಾಡಿದವರು ಸಣ್ಣ ಸಹಿ ಮಾಡಬೇಕು ಎಂದರೆ ಸರಿ. ಆ ರೀತಿ over writing ಕೈಯಲ್ಲಿ ಮಾಡಲಾಗಿದೆ ಎಂದರೆ ಸರಿ. ನಿ ಪಿ 4 ರಲ್ಲಿ to address ಕೈ ಬರವಣಿಗೆಯಲ್ಲಿದೆ ಎಂದರೆ ಸರಿ. ಸಾಕ್ಷಿದಾರರು ಹಾಜರಿಲ್ಲದ ಸಮಯದಲ್ಲಿ ಆ ರೀತಿ ಬ್ಲಾಂಕ್ ಬಿಟ್ಟು ನಂತರ ಕೈಯಲ್ಲಿ ಬರೆಯಲಾಗುತ್ತದೆ ಎಂದರೆ ಸರಿಯಲ್ಲ.

5. ನಿ ಪಿ 8 ಮಹಜರನ್ನು ಪರಿಶೀಲಿಸಿದ್ದೇನೆ. ನಿ ಪಿ 8 ಕ್ಕೆ ಎಲ್ಲಾ ಸಹಿಗಳನ್ನು ಕೃತ್ಯದ ಸ್ಥಳದಲ್ಲಿ ಮಾಡಿದ್ದಾರೆ. ಯಾರ ಕಡೆಯಿಂದ ತನ್ನ ಅಂಗಶೋಧನೆ ಆಗಬೇಕೆಂದು ಆರೋಪಿ ತಿಳಿಸಿದ ಎಂಬ ವಿಷಯ ನಿ ಪಿ 6 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ನಿ ಪಿ 7 ರಲ್ಲಿ ಪತ್ರಾಂಕಿತ ಅಧಿಕಾರಿ ಕಡೆಯಿಂದ ತನ್ನ ಅಂಗಶೋಧನೆ ಆಗಬೇಕೆಂದು ತಿಳಿಸಿದ್ದಾನೆ ಎನ್ನುತ್ತಾರೆ. ನಿ ಪಿ 7 ರಲ್ಲಿ ಪತ್ರಾಂಕಿತ ಅಧಿಕಾರಿಯ ಸಹಿ ಇಲ್ಲ ಎಂದರೆ ಸರಿ.

6. ಎಫ್.ಐ.ಆರ್ ನಲ್ಲಿ ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ ಎಷ್ಟು ಇದೆ ಎಂದರೆ ಸಾಕ್ಷಿದಾರರು 1, 16.30 ಎನ್ನುತ್ತಾರೆ. ನ್ಯಾಯಾಲಯಕ್ಕೆ ಹಾಜರು ಪಡಿಸಿದ ಎಫ್.ಐ.ಆರ್ ನಲ್ಲಿ ಜನರಲ್ ಡೈರಿ ಉಲ್ಲೇಖ ಸಂಖ್ಯೆ ಮತ್ತು ಸಮಯ 1, 18.00 ಎಂದು ಇದ್ದು, ಸಾಕ್ಷಿದಾರರಿಗೆ ಈ ವ್ಯತ್ಯಾಸದ ಬಗ್ಗೆ ವಿವರಣೆ ಕೇಳಿದಾಗ ಸಾಕ್ಷಿದಾರರು ಎಫ್.ಐ.ಆರ್ ಮಾಡುವವರ ಕೈ ತಪ್ಪಿನಿಂದ ಆಗಿದೆ ಎನ್ನುತ್ತಾರೆ. ತಮ್ಮ ಬಳಿ ಇರುವ ಎಫ್.ಐ.ಆರ್ ಪ್ರತಿಯಲ್ಲೂ ಸಹಾ ಜನರಲ್ ಡೈರಿ ಸಮಯ 16.30 ಇದೆ ಎನ್ನುತ್ತಾರೆ. ನಿ ಪಿ 1 ರಲ್ಲಿ ಪಿಎಸ್ಐ ಮಂಜುಳಾ ರವರಿಗೆ ಬಾತ್ಮೀ ಬಂದ ಸಮಯ ಮಧ್ಯಾಹ್ನ 2.00 ಗಂಟೆ ಎಂದು ನಮೂದಿಸಲಾಗಿದೆ ಎಂದರೆ ಸರಿ.

7. ನಮ್ಮ ಠಾಣೆಯಿಂದ ನರಸಾಪುರದ ಕಾಫಿ ಡೇ ಹತ್ತಿರ ಹೋಗಲು 20 ನಿಮಿಷ ಸಮಯ ಬೇಕಾಗುತ್ತದೆ. ನಿ ಪಿ 8 ಮಹಜರಿನಲ್ಲಿ ಅದು ಯಾವ ಅಪರಾಧ ಸಂಖ್ಯೆಗೆ ಸಂಬಂಧಿಸಿದೆ

ಎಂದು ಅದರಲ್ಲಿ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಅದರಲ್ಲಿರುವ ಮಾಹಿತಿ ಆಧಾರದ ಮೇಲೆಯೇ ಈ ಪ್ರಕರಣದ ಎಫ್.ಐ.ಆರ್ ದಾಖಲಾಗಿದೆ ಎನ್ನುತ್ತಾರೆ.

8. ಮುದ್ದೆ ಮಾಲು ಗಾಂಜಾವನ್ನು ನನ್ನ ವಶಕ್ಕೆ ಫ್ರಾಸಾ 4 ರವರಿಂದ ಪಡೆದಾಗ ಅವರಿಗೆ ಪ್ರತ್ಯೇಕವಾಗಿ ಸ್ವೀಕೃತಿ ಪತ್ರ ನೀಡಿಲ್ಲ, ಆದರೆ ಕೇಸು ಡೈರಿಯಲ್ಲಿ ಅದರ ಬಗ್ಗೆ ನಮೂದಿಸಿದ್ದೇನೆ. ಫ್ರಾಸಾ 4 ರವರಿಂದ ಮುದ್ದೆ ಮಾಲನ್ನು ನನ್ನ ವಶಕ್ಕೆ ಪಡೆದಾಗ ಅದು ಸುಸ್ಥಿತಿಯಲ್ಲಿದೆ ಎಂದು ತೋರಿಸಲು ಮಹಜರು ಮಾಡಿಲ್ಲ ಎಂದರೆ ಸಾಕ್ಷಿದಾರರು ಆಗ ಮಹಜರು ಮಾಡಿಲ್ಲ ಎನ್ನುತ್ತಾರೆ. ಮುದ್ದೆ ಮಾಲನ್ನು ವಶಪಡಿಸಿಕೊಂಡ ಮೇಲೆ ಹಿಂದಿನ ತನಿಖಾಧಿಕಾರಿಯು ಸೀಲನ್ನು ಪಂಚಸಾಕ್ಷಿದಾರರ ವಶಕ್ಕೆ ನೀಡಿದ್ದರು. ನನ್ನ ತನಿಖೆಯ ಪ್ರಕಾರ ಫ್ರಾಸಾ 1 ರವರು ಆ ಸೀಲನ್ನು ಚಾಸಾ 2 ಪ್ರಜ್ವಲ್ ಇವರ ಕೈಗೆ ನೀಡಿದ್ದಾರೆ. ಸದರಿ ವಿಷಯವನ್ನು ನನಗೆ ಫ್ರಾಸಾ 1 ರವರು ತಿಳಿಸಿದ್ದರು. ಆ ವಿಷಯವನ್ನು ಚಾರ್ಜ್ ಶೀಟ್ ನಲ್ಲಾಗಲೀ, ಸಿಡಿಯಲ್ಲಾಗಲೀ ನಮೂದಿಸಿಲ್ಲ. ಮುದ್ದೆ ಮಾಲನ್ನು ನನ್ನ ವಶಕ್ಕೆ ಪಡೆದಾಗ ಅದು ಸುಸ್ಥಿತಿಯಲ್ಲಿತ್ತು ಎಂದು ನಾನು ಪ್ರತ್ಯೇಕವಾಗಿ ದೃಢೀಕರಿಸಿಲ್ಲ, ಆದರೆ ಅದು ಸುಸ್ಥಿತಿಯಲ್ಲಿತ್ತು.

9. ಮುದ್ದೆ ಮಾಲನ್ನು ನನ್ನ ವಶಕ್ಕೆ ಪಡೆದಾಗ ಅದು ಸ್ಟೋರ್ ರೂಮಿನಲ್ಲಿತ್ತು. ಎನ್.ಡಿ.ಪಿ.ಎಸ್ ಅಧಿನಿಯಮದ ಪ್ರಕಾರ ಮಾದಕ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಲ್ಲಿ ಅದನ್ನು ಪ್ರತ್ಯೇಕವಾಗಿ ಇಡಬೇಕು ಎಂದು ಇದೆ ಎಂದರೆ ಸರಿ. ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮುದ್ದೆ ಮಾಲು ಸ್ಟೋರ್ ರೂಮಿನ ಬೀರುವಿನಲ್ಲಿತ್ತು. ಆ ಬೀರುವಿನಲ್ಲಿ ಎನ್.ಡಿ.ಪಿ.ಎಸ್ ಪ್ರಕರಣಕ್ಕೆ ಸಂಬಂಧಿಸಿದ ಬೇರೆ ಪ್ರಕರಣದ ಮುದ್ದೆ ಮಾಲು ಸಹಾ ಇದ್ದವು. ಮುದ್ದೆ ಮಾಲನ್ನು ನನ್ನ ವಶಕ್ಕೆ ಪಡೆಯುವಾಗ ಸ್ಟೋರ್ ರೂಮ್ ರಿಜಿಸ್ಟರ್ ನಲ್ಲಿ ಎಂಟ್ರಿ ಮಾಡಿದ್ದೇನೆ. ಇನ್ವೆಂಟ್ರಿ ಆದ ಮೇಲೆ ವಾಪಸ್ಸು ಸ್ಟೋರ್ ರೂಮಿನಲ್ಲಿ ಇಡುವಾಗ ಸ್ಟೋರ್ ರೂಮ್ ನ ಮುದ್ದೆ ಮಾಲು ರಿಜಿಸ್ಟರ್ ನಲ್ಲಿ ನಮೂದಿಸಿದ್ದೇನೆ.

(ನ್ಯಾಯಾಲಯದ ಬೆಳಗಿನ ಸಮಯವಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.)

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ**,** ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.**)**

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ

ಮಧ್ಯಾಹ್ನ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಎಫ್.ಎ ವಕೀಲರಿಂದಃ

10. ಮುದ್ದೆ ಮಾಲನ್ನು ನನ್ನ ವಶಕ್ಕೆ ಪಡೆದಾಗ ಅದಕ್ಕೆ ಅಂಟಿಸಿದ್ದ ಸಹಿಗಳು ಇರುವ ಚೀಟಿಯಲ್ಲಿ ಫ್ರಾಸಾ 1 ಇವರ ಪದನಾಮದ ಸೀಲು ಇತ್ತು. ಇನ್ವೆಂಟ್ರಿ ಮಾಡಿಸಲು ಮಾನ್ಯ ನ್ಯಾಯಾಧೀಶರಿಗೆ ಮನವಿಯನ್ನು ಫ್ರಾಸಾ 4 ರವರು ಸಲ್ಲಿಸಿದ್ದರು. ಮಾನ್ಯ ನ್ಯಾಯಾಧೀಶರು ಅನುಮತಿ ನೀಡಿದ 13 ದಿವಸದ ನಂತರ ಇನ್ವೆಂಟ್ರಿಯನ್ನು ಮಾಡಿದ್ದೇನೆ. ಇನ್ವೆಂಟ್ರಿಯನ್ನು ತಕ್ಷಣವೇ ಮಾಡಿಸಬೇಕೆಂದು ಎನ್.ಡಿ.ಪಿ.ಎಸ್ ಕಾಯ್ದೆ ಹೇಳುತ್ತದೆ ಎಂದರೆ ಸಾಕ್ಷಿದಾರರು ಮಾನ್ಯ ನ್ಯಾಯಾಧೀಶರು ದಿನಾಂಕ ನೀಡಿದ್ದರಿಂದ ಆ ದಿನಾಂಕದಂದು ಇನ್ವೆಂಟ್ರಿ ಮಾಡಿಸಿದ್ದೇನೆ ಎನ್ನುತ್ತಾರೆ. ಫ್ರಾಸಾ 4 ರವರು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಮನವಿಯನ್ನು ದಿನಾಂಕ 21.10.2023 ರಂದು ಸಲ್ಲಿಸಿ ಅನುಮತಿ ಪಡೆದಿದ್ದಾರೆ. ಅದೇ ದಿವಸ ಕೋರ್ಟ್ ಪಿಸಿ ರವರು ಮಾನ್ಯ ಸಿಜೆಎಂ ನ್ಯಾಯಾಧೀಶರಿಗೆ ಇನ್ವೆಂಟ್ರಿ ಬಗ್ಗೆ ತಿಳಿಸಿದಾಗ ಅವರು ದಿನಾಂಕ 04.11.2023 ಎಂದು ಮೌಖಿಕವಾಗಿ ದಿನಾಂಕವನ್ನು ನೀಡಿದ್ದಾರೆ. ಮಾನ್ಯ ಸಿಜೆಎಂ ನ್ಯಾಯಾಲಯಕ್ಕೂ ಸಹಾ ನೀವು ಲಿಖಿತವಾಗಿ ಮನವಿ ನೀಡಬೇಕಾಗಿತ್ತು ಎಂದರೆ ಸಾಕ್ಷಿದಾರರು ಲಿಖಿತವಾಗಿ ಮನವಿ ನೀಡಿಲ್ಲ ಎನ್ನುತ್ತಾರೆ.

11. ಇನ್ವೆಂಟ್ರಿ ಸಮಯದಲ್ಲಿ ಸ್ಯಾಂಪಲ್ ಗಾಗಿ ಒಂದೇ ಪಾಕೆಟ್ ನಲ್ಲಿ 30 ಗ್ರಾಂ ಗಾಂಜಾವನ್ನು ಸಂಗ್ರಹಿಸಿದ್ದೇನೆ. ಮು ಮಾಲು 1 ನ್ನು ಸೀಲ್ ಮಾಡಲು ಉಪಯೋಗಿಸಿದ 'K' ಎಂಬ ಮೊಹರನ್ನು ನನ್ನ ಬಳಿಯೇ ಇಟ್ಟುಕೊಂಡೆ. ನಿ ಪಿ 15 ಫೋಟೋಗಳನ್ನು ಶ್ರೀ ಕೃಷ್ಣ ಕಲರ್

ಲ್ಯಾಬ್ ನಲ್ಲಿ ಪ್ರಿಂಟ್ ಹಾಕಿಸಲಾಗಿದೆ. 'K' ಎಂಬ ಮೊಹರನ್ನು ಎಷ್ಟು ಪ್ರಕರಣಗಳಲ್ಲಿ ಉಪಯೋಗಿಸಿದ್ದೀರಿ ಎಂದರೆ ಸಾಕ್ಷಿದಾರರು ಬೇರೆ ಯಾವುದೇ ಪ್ರಕರಣಕ್ಕೆ ಉಪಯೋಗಿಸಿಲ್ಲ ಎನ್ನುತ್ತಾರೆ. ಆ ಸೀಲನ್ನು ಪಂಚರ ವಶಕ್ಕೆ ನೀಡಬೇಕಾಗಿತ್ತು ಎಂದರೆ ಸಾಕ್ಷಿದಾರರು ಆ ಸಮಯದಲ್ಲಿ ಪಂಚಸಾಕ್ಷಿದಾರರು ಇರಲಿಲ್ಲ, ನಾನು ಮತ್ತು ಮಾನ್ಯ ನ್ಯಾಯಾಧೀಶರು ಇದ್ದೆವು ಎನ್ನುತ್ತಾರೆ.

12. ಇನ್ವೆಂಟ್ರಿ ಆದ ಮೇಲೆ ಬಲ್ಕ್ ಗಾಂಜಾವನ್ನು ಪುನಃ ಸ್ಟೋರ್ ರೂಮಿನಲ್ಲಿ ಇಟ್ಟಿದ್ದೆ. ಮುದ್ದೆ ಮಾಲು ರಿಜಿಸ್ಟರ್ ನಲ್ಲಿ ಆ ಬಗ್ಗೆ ನಮೂದಿಸಿದ್ದೇನೆ. ಕೇಸ್ ಡೈರಿಯಲ್ಲೂ ಸಹಾ ಆ ಬಗ್ಗೆ ನಮೂದು ಮಾಡಿದ್ದೇನೆ. ಎಷ್ಟು ದಿವಸದ ಒಳಗಾಗಿ ಮುದ್ದೆ ಮಾಲನ್ನು ಎಫ್.ಎಸ್.ಎಲ್ ಪರೀಕ್ಷೆಗೆ ಕಳುಹಿಸಬೇಕು, ಅದನ್ನು ನೀವು ಪಾಲಿಸಿಲ್ಲ ಎಂದರೆ ಸಾಕ್ಷಿದಾರರು ನಮ್ಮ ಡಿಜಿಪಿ ರವರ ನಿರ್ದೇಶನ 15 ದಿನಗಳ ಒಳಗೆ ಕಳುಹಿಸಬೇಕು ಎಂದು ಇದೆ, ಅಷ್ಟು ದಿವಸದ ಒಳಗೆ ಕಳುಹಿಸಿದ್ದೇನೆ ಎನ್ನುತ್ತಾರೆ.

13. ನಾನು ಗಾಂಜಾವನ್ನು ನನ್ನ ವಶಕ್ಕೆ ಪಡೆದಿಲ್ಲ ಮತ್ತು ಇನ್ವೆಂಟ್ರಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಈ ಪ್ರಕರಣದ ಅನುಮಾನಾಸ್ಪದವಾಗಿದೆ ಎಂದು ನನಗೆ ಕಂಡು ಬಂತು ಎಂದರೆ ಸರಿಯಲ್ಲ. ಆ ರೀತಿ ಕಂಡು ಬಂದರೂ ಸಹಾ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ, ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಯಾಂಪಲ್ ನ್ನು ಎಫ್.ಎಸ್.ಎಲ್ ಗೆ ಕಳುಹಿಸಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ**,** ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.**)**

**ಓ. ಹೇ. ಕೇ. ಸ. ಇದೆ,**

**(**ವಿಜಯಕುಮಾರ್ ಎಂ. ಆನಂದಶೆಟ್ಟಿ**)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ